ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 2–1–2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Inauguration of 21st International Conference on Frontiers in Yoga Research and its Applications (INCOFYRA) by**<br>**Shri Narendra Modi,**<br>Hon'ble Prime Minister of India<br><br>**Guests of Honour:**<br><br>**Sri Vajubhai Vala,**<br>Hon'ble Governor of Karnataka<br><br>**Sri Siddaramaiah,**<br>Hon'ble Chief Minister of Karnataka<br><br>**P.S.:** ***Vehicle has been arranged for media persons who have security passes issued by S.P. Bangalore Rural*****, at 11.00 a.m. on 3-1-2016 from Vartha Soudha, Bhagavan Mahaveer Road, Bangalore -560 001**<br>**Contact : Mr Suswaram Gokul 94490 33329** | **3-1-2016**<br>**Sunday**<br>**3-30 P.M.** | **Vivekananda Yoga Anusandana Samsthana, Jigani, Anekal Taluk** |

| | | | |
|---|---|---|---|
| | **Ms. Srinidhi .M**<br>**98446 39898** | | |
| **2** | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸ್ಥಳೀಯ ಸಂಸ್ಥೆಗಳ ಬಗ್ಗೆ ಶಾಸಕರು ಹಾಗೂ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಪುನರ್‌ರೂಪ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಕೆ.ಆರ್. ರಮೇಶ್‌ಕುಮಾರ್ ಅವರಿಂದ ಔತಣ ಕೂಟ** | **4–1–2016**<br>**ಸೋಮವಾರ**<br>**ರಾತ್ರಿ**<br>**8–00 ಗಂಟೆಗೆ** | **ಬ್ಯಾಂಕ್ವೆಟ್ ಹಾಲ್,**<br>**ವಿಧಾನ ಸೌಧ,**<br>**ಬೆಂಗಳೂರು** |

**ನಿರ್ದೇಶಕರ ಪರವಾಗಿ**

# ಪತ್ರಿಕಾ ಪ್ರಕಟಣೆ

## ಕೆಓಎಸ್ ಪರೀಕ್ಷಾ ಶುಲ್ಕ ಪಾವತಿ

**ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)**

ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆ 2016 ರ ಮಾರ್ಚ್ 30 ರಿಂದ ಏಪ್ರಿಲ್ 09 ರವರೆಗೆ ನಡೆಯಲಿದ್ದು ಕರ್ನಾಟಕ ಮುಕ್ತ ಶಾಲೆ– ಕೆ.ಓ.ಎಸ್ ಕಲಿಕಾ ಕೇಂದ್ರಗಳಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿಸಲು ದಿನಾಂಕ:20.01.2016ಕ್ಕೆ ಕಡೆಯ ದಿನಾಂಕವಾಗಿದೆ. ಆಯಾ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದಿನಾಂಕ:21.01.2016ರೊಳಗೆ ನಿಗಧಿತ ಶುಲ್ಕ ಪಾವತಿಸುವಂತೆ (ನಿರ್ದೇಶಕರು)ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಲವಿ/ಬಾಬು/ಕೆಎಂ

# Last Date for KOS Examination Fees

**Bangalore, December 2 (Karnataka Information)**

. Karnataka Open School-K.O.S Examination is scheduled to be held from Date:30.03.2016 to 09.04.2016.The last date for fees collection is 20.01.2016.

Students, and parents are hereby informed to pay the fees on or before 20.01.2016 in respective concerned K.O.S Study Centers, said a press release by Director(Other Exams), Karnataka Secondary Education Examination Board, Bangalore.

pallavi/babu/km

## ಸಚಿವರ ಪ್ರವಾಸ

**ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)**

**ಪೌರಾಡಳಿತ, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಖಾತೆ ಸಚಿವ ಡಾ: ಖಮರುಲ್ ಇಸ್ಲಾಂ ಅವರು ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಜನವರಿ 3 ಮತ್ತು 4 ರಂದು ಪ್ರವಾಸ ಮಾಡುವರು.**

**ಪಲ್ಲವಿ/ ಬಾಬು/ಕೆಎಂ**

## ನಕ್ಷತ್ರ ವೀಕ್ಷಣೆ ಕಾರ್ಯಕ್ರಮ

**ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)**

ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ಸಂಸ್ಥೆಯು ಜವಾಹರ್‌ಲಾಲ್ ನೆಹರೂ ತಾರಾಲಯದಲ್ಲಿ "ನಕ್ಷತ್ರ ವೀಕ್ಷಣೆ" ಕಾರ್ಯಕ್ರಮವನ್ನು ಜನವರಿ 3 ರಂದು ಸಂಜೆ 6–30 ಕ್ಕೆ ಏರ್ಪಡಿಸಿದೆ. ಹೆಚ್ಚಿನ ವಿವರಗಳಿಗಾಗಿ 2237 9725/ 2226 6084 ಅಥವಾ http://www.taralaya.org/monthly_sky_chart.php ಅನ್ನು ಸಂಪರ್ಕಿಸಬಹುದಾಗಿದೆ.

ಪಲ್ಲವಿ/ಬಾಬು/ಕೆಎಂ

## ಗ್ರಂಥಾಲಯಗಳಿಗೆ ಅನುದಾನ ನೀಡಲು ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ 2 (ಕರ್ನಾಟಕ ವಾರ್ತೆ)**

**ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ 2015–16 ನೇ ಸಾಲಿಗೆ ರಾಜ್ಯದ ಖಾಸಗಿ/ಅನುದಾನಿತ ಗ್ರಂಥಾಲಯಗಳಿಗೆ ಅನುದಾನ ಬಿಡುಗಡೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

ತಮ್ಮ ಸಮೀಪದ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಉಪ ನಿರ್ದೇಶಕರ/ಮುಖ್ಯ ಗ್ರಂಥಾಲಯಾಧಿಕಾರಿಗಳನ್ನು ಸಂಪರ್ಕಿಸಿ ಅವರಿಂದ ತಮ್ಮ ಗ್ರಂಥಾಲಯಗಳ ತಪಾಸಣೆ ಕೈಗೊಂಡ ನಂತರ ದಿ: 16-01-2016 ರ ಒಳಗಾಗಿ 2015-16 ನೇ ಸಾಲಿಗೆ ಅನುದಾನ ಕೋರಿಕೆ ಮನವಿ ಪತ್ರವನ್ನು ಸಂಬಂಧಪಟ್ಟ ಉಪ ನಿರ್ದೇಶಕರ ಮುಖ್ಯ ಗ್ರಂಥಾಲಯಾಧಿಕಾರಿಗಳ ಸಕ್ಷಮ ಪ್ರಾಧಿಕಾರ ಮುಖಾಂತರ ನಿರ್ದೇಶನಾಲಯ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಪಲ್ಲವಿ/ಬಾಬು/ಕೆಎಂ